Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in** **principal@klsvdit.edu.in**

Date: 31-01-2023

**ಪತ್ರಿಕಾ ಪ್ರಕಟಣೆ:**

## ವಿ. ಡಿ. ಐ. ಟಿ. ಯಲ್ಲಿ ಸಂಶೋಧನೆ ಕಾರ್ಯಕ್ಕೆ ರಾಜ್ಯ ಸರ್ಕಾರದ ಧನ ಸಹಾಯ

ಕರ್ನಾಟಕ ರಾಜ್ಯ ಸರ್ಕಾರದ ವಿಜನ್ ಗ್ರೂಪ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ (ವಿ. ಜಿ. ಎಸ್. ಟಿ)ಯು ಕೆ. ಎಲ್. ಎಸ್. ವಿ. ಡಿ. ಐ. ಟಿ. ಹಳಿಯಾಳವು ಕೈಗೊಳ್ಳಲಿರುವ ಸಂಶೋಧನೆ ಕಾರ್ಯಕ್ಕೆ 20ಲಕ್ಷ ರೂಪಾಯಿ ಅನುದಾನ ನೀಡಿದೆ. ಯಾಂತ್ರಿಕ ವಿಭಾಗದ ಸಹ ಪ್ರಾಧ್ಯಾಪಕರು ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಮುಖ್ಯಸ್ಥರಾಗಿರುವ ಡಾ. ಮುರುಗಯ್ಯ ಎಸ್ ಬಿ ಮತ್ತು ಸಹಾಯಕ ಪ್ರಾಧ್ಯಾಪಕರಾದ ಪ್ರೊ. ರವಿಕುಮಾರ್ ಟಿ ಇವರುಗಳು ಕೈಗೊಂಡಿರುವ " ತಿರುಗುವ ಉಪಕರಣಗಳ ಕಂಪನಾ ವಿಶ್ಲೇಷಣೆ " ಸಂಶೋಧನೆ ಕಾರ್ಯಕ್ಕೆ ವಿ. ಜಿ. ಎಸ್. ಟಿ. ಯು ಸಹಾಯಧನ ನೀಡಿದೆ. ಬೋಧಕ ಸಿಬ್ಬಂದಿಯ ಈ ಸಾಧನೆಗೆ ಮಹಾವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ. ವಿನಾಯಕ ಲೋಕೂರ್ ಹರ್ಷ ವ್ಯಕ್ತಪಡಿಸಿದ್ದಾರೆ. ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿ ಅವರು ಮುರುಗಯ್ಯ ಹಾಗೂ ರವಿಕುಮಾರ್ ಅವರ ಯೋಜನಾ ಕಾರ್ಯ ಯಶಸ್ವಿಯಾಗಲಿ ಎಂದು ಹಾರೈಸಿ ಸಂತಸ ವ್ಯಕ್ತಪಡಿಸಿದ್ದಾರೆ. ವಿಭಾಗ ಮುಖ್ಯಸ್ತ ಪ್ರೊ. ಸುಧೀರ್ ಕುಲಕರ್ಣಿ ಮತ್ತು ಎಲ್ಲಾ ಬೋಧಕ ಬೋಧಕೇ ತರ ಸಿಬ್ಬಂದಿಗಳು ಅಭಿನಂದಿಸಿ ಶುಭ ಹಾರೈಸಿದ್ದಾರೆ.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal



